# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 693
ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 11.12.2020
ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತೆ ಪಟ್ಟಿ ಬಗ್ಗೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ನೀಡಿದ ತೀರ್ಪಿನಂತೆ ಜೇಷ್ಠತೆಯಲ್ಲಿಯ ಅಂಶಗಳ ಕುರಿತು ಅಭಿಪ್ರಾಯ ನೀಡಲು ಸಮಿತಿಯನ್ನು ರಚಿಸಲಾಗಿದೆಯೇ;<br>ರಚಿಸಿದ್ದಲ್ಲಿ ಆದೇಶ ಪ್ರತಿ ಒದಗಿಸುವುದು; | ಹೌದು.<br><br>ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ 197 ಗ್ರಾಪಂಕಾ 2019 ರ ಪ್ರತಿಯನ್ನು ಅನುಬಂಧ-1 ಆಗಿ ನೀಡಲಾಗಿದೆ. |
| (ಆ) | ಸದರಿ ಸಮಿತಿ ರಚನೆಯ ಉದ್ದೇಶಗಳು, ಕಾರ್ಯವ್ಯಾಪ್ತಿ ಹಾಗೂ ಅವಧಿಯ ವಿವರಗಳನ್ನು ಒದಗಿಸುವುದು) | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಗ್ರಾಅಪ 374 ಗ್ರಾಪಂಕಾ 2013 ದಿನಾಂಕ:21-02-2014 ರಲ್ಲಿ ದಿನಾಂಕ:31-12-2011 ರಲ್ಲಿದ್ದಂತೆ ರಾಜ್ಯ ಮಟ್ಟದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿತ್ತು.<br><br>ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಗ್ರಾಅಪ 432 ಗ್ರಾಪಂಕಾ 2017 ದಿನಾಂಕ:28-12-2017 ರಲ್ಲಿ ದಿನಾಂಕ:31-07-2017 ರಲ್ಲಿದ್ದಂತೆ ರಾಜ್ಯ ಮಟ್ಟದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿತ್ತು.<br><br>ಮೇಲ್ಕಂಡ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದ ರಾಜ್ಯ ಮಟ್ಟದ 2 ಜ್ಯೇಷ್ಠತಾ ಪಟ್ಟಿಗಳನ್ನು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ: 2259-2261/2014 ರಲ್ಲಿ ದಿನಾಂಕ:18-03-2019 ರಂದು ನೀಡಿರುವ ಆದೇಶದಲ್ಲಿ ರದ್ದುಪಡಿಸಿದೆ.<br><br>ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಆದೇಶವನ್ನು ಗಮನದಲ್ಲಿ ಇಟ್ಟುಕೊಂಡು ಸರ್ಕಾರದ ಹಂತದಲ್ಲಿ ಒಂದು ಸಮಿತಿಯನ್ನು ರಚಿಸಿ ಪರಿಷ್ಕೃತ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಕ್ರಮ ವಹಿಸುವಂತೆ ಸೂಚಿಸಿದ ಹಿನ್ನೆಲೆಯಲ್ಲಿ ನಿರ್ದೇಶಕರು, ಪಂಚಾಯತ್ ರಾಜ್-1, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿತ್ತು. |

| | | |
|---|---|---|
| (ಇ) | ಈ ಸಮಿತಿಯು ಎಷ್ಟು ಭಾರಿ ಸಭೆ ಸೇರಿದೆ; (ಸಭೆ ಸೇರಿದ ದಿನಾಂಕ ಹಾಗೂ ಸಮಿತಿಯ ನಡವಳಿಗಳ ಹಾಗೂ ವರದಿಯ ಪ್ರತಿಗಳನ್ನು ಒದಗಿಸುವುದು) | ಈ ಸಮಿತಿಯು ಇದುವರೆಗೆ 03 ಬಾರಿ ಸಭೆ ಸೇರಿದೆ.<br><br>ದಿನಾಂಕ:13.01.2020, 28.01.2020 ಮತ್ತು ದಿ:06.06.2020.<br><br>ಮೇಲ್ಕಂಡ ಮೂರು ಸಭೆಗಳ ನಡವಳಿಗಳನ್ನು ಅನುಬಂಧ 2, 3 ಮತ್ತು 4 ಆಗಿ ನೀಡಲಾಗಿದೆ.<br><br>ಪ್ರಸ್ತುತ ಆಯುಕ್ತರು, ಪಂಚಾಯತ್ ರಾಜ್ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು 2 ಬಾರಿ ಸಭೆಗಳನ್ನು ನಡೆಸಿರುತ್ತದೆ. |
| (ಈ) | ಸದರಿ ಸಮಿತಿಗೆ ಯಾವುದೇ ಅಂಶದ ಮೇಲೆ ನಿರ್ಣಯ ಕೈಗೊಳ್ಳಲು ಅಥವಾ ಅಭಿಪ್ರಾಯ ನೀಡಲು ಅಧಿಕಾರವಿದೆಯೇ; | ಸಮಿತಿಯು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನೀಡಿರುವ ಆದೇಶದ ಅನುಸಾರ ಈ ಕೆಳಕಂಡ ಅಂಶಗಳ ಕುರಿತು ಪರಿಶೀಲಿಸಲು ತಿಳಿಸಲಾಗಿತ್ತು.<br><br>1) ದಿನಾಂಕ: 03.03.2010 ರಂದು ಖಾಲಿ ಇದ್ದ 178 ಪಂಚಾಯಿತಿ ವಿಸ್ತರಣಾಧಿಕಾರಿ ಹುದ್ದೆಗಳಿಗೆ ಗ್ರೇಡ್-1 ಗ್ರಾಮ ಪಂಚಾಯಿತಿ ಕಾರ್ಯದರ್ಶಿ ವೃಂದದ ಅರ್ಹ ನೌಕರರಿಗೆ ನೋಷನಲ್ ಬಡ್ತಿ ನೀಡುವ ಬಗ್ಗೆ ಪರಿಶೀಲಿಸಿ ಅಭಿಪ್ರಾಯ ನೀಡುವುದು.<br><br>2) ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957 ರ ನಿಯಮ 5(1)(ಎ) ಅನುಸಾರ ಮತ್ತು ವಿ.ಬಿ ಬಾದಾಮಿ ಪ್ರಕರಣದಲ್ಲಿ ಸರ್ಕಾರವು ದಿ: 05.07.1956 ರಂದು ಹೊರಡಿಸಿರುವ ಅಧಿಕೃತ ಜ್ಞಾಪನದ ಅನುಸಾರ ನೇರ ನೇಮಕಾತಿ ಹೊಂದಿದ ನೌಕರರ ಇಂಟರ್-ಸೆ ಜ್ಯೇಷ್ಠತೆ ನಿಗದಿಪಡಿಸುವ ಬಗ್ಗೆ ಪರಿಶೀಲಿಸಿ ಅಭಿಪ್ರಾಯ ನೀಡುವುದು.<br><br>3) ಜಿಲ್ಲಾ ಮಟ್ಟದ ಜ್ಯೇಷ್ಠತಾ ಪಟ್ಟಿಗಳನ್ನು ಒಟ್ಟುಗೂಡಿಸಿ ರಾಜ್ಯ ಮಟ್ಟದ ಜ್ಯೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸುವಾಗ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957ರ ನಿಯಮ 7-ಎ ಅನುಸಾರ ಸಿದ್ಧಪಡಿಸಿರುವ ಬಗ್ಗೆ ಪರಿಶೀಲಿಸಿ ಅಭಿಪ್ರಾಯ ನೀಡುವುದು.<br><br>4) ವಿವಿಧ ನೌಕರರು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ: 2259 ರಿಂದ 2261/2014, 2782 ರಿಂದ 2292/2014, 496 ರಿಂದ 530/2015, 4658 ರಿಂದ 4666/2015, 3204 ರಿಂದ 322/2014, 2123 ರಿಂದ 2168/2014 ರಲ್ಲಿ ಕೋರಿರುವ ಇತರೆ ಅಂಶಗಳಿಗೆ ಸಂಬಂಧಪಟ್ಟಂತೆ ಮಾನ್ಯ ಕೆ.ಎ.ಟಿ ಯು ನೀಡಿರುವ ನಿರ್ದೇಶನದ ಅನುಸಾರ ಕ್ರಮವಹಿಸುವ ಬಗ್ಗೆ ಅಭಿಪ್ರಾಯ ನೀಡುವುದು.<br><br>5) ಈ ವಿಷಯಕ್ಕೆ ಸಂಬಂಧಪಟ್ಟಂತೆ ಪರಿಶೀಲನೆಯ ಸಂದರ್ಭದಲ್ಲಿ ಉದ್ಭವವಾಗುವ ಇತರೆ ಅಂಶಗಳ ಬಗ್ಗೆ ಅಭಿಪ್ರಾಯ ನೀಡುವುದು. |

| | | |
|---|---|---|
| (ಉ) | ದಿನಾಂಕ:29.09.2020 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬರೆದ ಪತ್ರದಲ್ಲಿ ದಿನಾಂಕ:06.06.2020 ರಂದು ಸಮಿತಿಯ ನಿರ್ಣಯದಂತೆ ಎಂದು ನಮೂದಿಸಲಾಗಿದ್ದು, ದಿನಾಂಕ: 06.06.2020 ರಂದು ಯಾವ ಅಂಶದ ಮೇಲೆ ನಿರ್ಣಯ ಕೈಗೊಳ್ಳಲಾಗಿದೆ. ಹಾಗೂ ಸರ್ಕಾರದ ಯಾವ ನಿಯಮಗಳ ಅಡಿ ಸದರಿ ನಿರ್ಣಯ ಕೈಗೊಳ್ಳಲಾಗಿದೆ ? ಸದರಿ ಸಭೆಗೆ ಹಾಜರಿದ್ದ ಸದಸ್ಯರು ಯಾರು? (ಸದಸ್ಯರ ರುಜುವುಳ್ಳ ನಿರ್ಣಯದ ಪ್ರತಿ ಒದಗಿಸುವುದು) | ದಿನಾಂಕ: 06.06.2020 ರಂದು ನಡೆದ ಸಮಿತಿಯ ಸಭೆಯಲ್ಲಿ ವಿವಿಧ ಅಂಶಗಳ ಮೇಲೆ ತೆಗೆದುಕೊಂಡಿರುವ ನಿರ್ಣಯದ ಪ್ರತಿಯನ್ನು ಅನುಬಂಧ – 4 ಆಗಿ ನೀಡಲಾಗಿದೆ.<br><br>ಸದರಿ ಸಭೆಗೆ ಹಾಜರಾಗಿರುವ ಸದಸ್ಯರ ವಿವರವನ್ನು ಸಹ ನಡವಳಿಗಳಲ್ಲಿ ನಮೂದಿಸಲಾಗಿದೆ.<br><br>ನಿರ್ಣಯಕ್ಕೆ ಸಮಿತಿ ಅಧ್ಯಕ್ಷರಾದ ನಿರ್ದೇಶಕರು (ಪಂ.ರಾಜ್-1), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಸಹಿ ಮಾಡಿದ್ದು, ಸದಸ್ಯರು ಸಹಿ ಮಾಡಿರುವುದಿಲ್ಲ. |

ಸಂ. ಗ್ರಾಅಪ 876 ಗ್ರಾಪಂಅ 2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 693 ಕ್ಕೆ ಅನುಬಂಧ-1

ಅನುಬಂಧ-1

**ಕರ್ನಾಟಕ ಸರ್ಕಾರದ ನಡವಳಿ**

ವಿಷಯ: ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿ ಪರಿಷ್ಕರಣೆ ಸಂಬಂಧ ಸಮಿತಿ ರಚಿಸುವ ಬಗ್ಗೆ.

**ಪ್ರಸ್ತಾವನೆ:**

ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಮುಂಬಡ್ತಿ ಮತ್ತು ನೇರ ನೇಮಕಾತಿ ಮುಖಾಂತರ ನೇಮಕ ಹೊಂದಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವೃಂದದ ಜಿಲ್ಲಾ ಮಟ್ಟದ ಜೇಷ್ಠತಾ ಪಟ್ಟಿಗಳನ್ನು ಕ್ರೋಢೀಕರಿಸಿ ದಿನಾಂಕ: 21.02.2014 ಮತ್ತು 28.12.2017ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಹೊರಡಿಸಿದ್ದ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಗಳನ್ನು ಅರ್ಜಿ ಸಂಖ್ಯೆ:2259-2261/2014 ಮತ್ತು ಇತರ ಅರ್ಜಿಗಳಲ್ಲಿ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಪ್ರಶ್ನಿಸಿದ್ದು, ಈ ಜೇಷ್ಠತಾ ಪಟ್ಟಿಗಳನ್ನು ಮಾನ್ಯ ಆಡಳಿತ ನ್ಯಾಯ ಮಂಡಳಿಯು ದಿನಾಂಕ: 29.03.2019 ರ ಆದೇಶದಲ್ಲಿ ರದ್ದುಗೊಳಿಸಿದೆ ಮತ್ತು ಸದರಿ ಆದೇಶದಲ್ಲಿ ನೀಡಲಾದ ನಿರ್ದೇಶನಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ಹಂತದಲ್ಲಿ ಒಂದು ಸಮಿತಿಯನ್ನು ರಚಿಸಿ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಕ್ರಮವಹಿಸುವಂತೆ ಸೂಚಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಲು ಉದ್ದೇಶಿಸಲಾಗಿದೆ.

ಅದರಂತೆ ಈ ಆದೇಶ,

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/197/ಗ್ರಾಪಂಕಾ/2019, ಬೆಂಗಳೂರು, ದಿನಾಂಕ: 24.09.2019**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ರಾಜ್ಯಮಟ್ಟದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿದೆ.

| ಕ್ರ.ಸಂ | ಪದನಾಮ | |
|---|---|---|
| 1 | ನಿರ್ದೇಶಕರು (ಪಂ.ರಾಜ್-I), ಮತ್ತು ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. | ಅಧ್ಯಕ್ಷರು. |
| 2 | ಸಲಹೆಗಾರರು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. | ಸದಸ್ಯರು. |
| 3 | ಸರ್ಕಾರದ ಉಪಕಾರ್ಯದರ್ಶಿ, ಸಿ.ಆ.ಸು ಇಲಾಖೆ (ಸೇವಾ ನಿಯಮಗಳು-I) | ಸದಸ್ಯರು. |
| 4 | ಸರ್ಕಾರದ ಉಪಕಾರ್ಯದರ್ಶಿ, ಸೇವೆಗಳು-1, ಆರ್ಥಿಕ ಇಲಾಖೆ. | ಸದಸ್ಯರು. |
| 5 | ಸರ್ಕಾರದ ಉಪಕಾರ್ಯದರ್ಶಿ, (ಅಭಿಪ್ರಾಯ) ಕಾನೂನು ಇಲಾಖೆ. (ಸರ್ಕಾರದ ವಿಶೇಷ ಕಾರ್ಯದರ್ಶಿ, ಕಾನೂನು ಇಲಾಖೆ ಇವರಿಂದ ನಿಯೋಜಿಸಲ್ಪಡುವ ಅಧಿಕಾರಿ). | ಸದಸ್ಯರು. |
| 6 | ಸದಸ್ಯ ಕಾರ್ಯದರ್ಶಿ. | ಉಪ ನಿರ್ದೇಶಕರು ಹಾಗೂ ಸರ್ಕಾರದ ಅಧೀನ ಕಾರ್ಯದರ್ಶಿ(ಗ್ರಾಮ ಪಂಚಾಯಿತಿ), ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ. |

2...

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ರಾಜ್ಯಮಟ್ಟದ ಜೇಷ್ಠತಾ ಪಟ್ಟಿಯನ್ನು ಆಧರಿಸಿ ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡಲು ಪರಿಗಣಿಸಬೇಕಾಗುತ್ತದೆ. ಸಹಾಯಕ ನಿರ್ದೇಶಕರ ಹುದ್ದೆಯ ನಂತರ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಜಿಲ್ಲಾ ಪಂಚಾಯಿತಿಯ ಉಪಕಾರ್ಯದರ್ಶಿ ಹುದ್ದೆಗೆ ಬಡ್ತಿ ನೀಡಬೇಕಾಗಿದ್ದು ಈ ಸಂಬಂಧ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿ ಅವಶ್ಯಕವಿರುತ್ತದೆ.

ಸಮಿತಿಯು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನೀಡಿರುವ ನಿರ್ದೇಶನದ ಅನುಸಾರ ಈ ಕೆಳಕಂಡ ಅಂಶಗಳನ್ನು ಪರಿಶೀಲಿಸುವುದು.

1. ದಿನಾಂಕ: 03.03.2010 ರಂದು ಖಾಲಿ ಇದ್ದ 178 ಪಂಚಾಯಿತಿ ವಿಸ್ತರಣಾಧಿಕಾರಿ ಹುದ್ದೆಗಳಿಗೆ ಗ್ರೇಡ್-1 ಗ್ರಾಮ ಪಂಚಾಯಿತಿ ಕಾರ್ಯದರ್ಶಿ ವೃಂದದ ಅರ್ಹ ನೌಕರರಿಗೆ ನೋಷನಲ್ ಬಡ್ತಿ ನೀಡುವ ಬಗ್ಗೆ ಪರಿಶೀಲಿಸಿ ಅಭಿಪ್ರಾಯ ನೀಡುವುದು.
2. ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957 ರ ನಿಯಮ 5(1)(ಎ) ಅನುಸಾರ ಮತ್ತು ವಿ.ಬಿ. ಬಾದಾಮಿ ಪ್ರಕರಣದಲ್ಲಿ ಸರ್ಕಾರವು ದಿನಾಂಕ: 05.07.1956 ರಂದು ಹೊರಡಿಸಿರುವ ಅಧಿಕೃತ ಜ್ಞಾಪನದ ಅನುಸಾರ ನೇರ ನೇಮಕಾತಿ ಹೊಂದಿದ ನೌಕರರ ಇಂಟರ್-ಸೆ ಜೇಷ್ಠತೆ ನಿಗದಿಪಡಿಸುವ ಬಗ್ಗೆ ಪರಿಶೀಲಿಸಿ ಅಭಿಪ್ರಾಯ ನೀಡುವುದು.
3. ಜಿಲ್ಲಾ ಮಟ್ಟದ ಜೇಷ್ಠತಾ ಪಟ್ಟಿಗಳನ್ನು ಒಟ್ಟುಗೂಡಿಸಿ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸುವಾಗ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957 ರ ನಿಯಮ 7-ಎ ಅನುಸಾರ ಸಿದ್ಧಪಡಿಸುವ ಬಗ್ಗೆ ಪರಿಶೀಲಿಸಿ ಅಭಿಪ್ರಾಯ ನೀಡುವುದು.
4. ವಿವಿಧ ನೌಕರರು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ 2259 ರಿಂದ 2261/2014, 2782 ರಿಂದ 2292/2014, 496 ರಿಂದ 530/2015, 4658 ರಿಂದ 4666/2015, 3204 ರಿಂದ 3224/2014, 2123 ರಿಂದ 2168/2014 ರಲ್ಲಿ ಕೋರಿರುವ ಇತರೆ ಅಂಶಗಳಿಗೆ ಸಂಬಂಧಪಟ್ಟಂತೆ ಮಾನ್ಯ ಕೆ.ಎ.ಟಿ ಯು ನೀಡಿರುವ ನಿರ್ದೇಶನದ ಅನುಸಾರ ಕ್ರಮವಹಿಸುವ ಬಗ್ಗೆ ಅಭಿಪ್ರಾಯ ನೀಡುವುದು.
5. ಈ ವಿಷಯಕ್ಕೆ ಸಂಬಂಧಪಟ್ಟಂತೆ ಪರಿಶೀಲನೆಯ ಸಂದರ್ಭದಲ್ಲಿ ಉದ್ಭವವಾಗುವ ಇತರೆ ಅಂಶಗಳ ಬಗ್ಗೆ ಅಭಿಪ್ರಾಯ ನೀಡುವುದು.

ಈ ಕಾರ್ಯವನ್ನು ಸಮಿತಿಯು ಎರಡು ತಿಂಗಳ ಅವಧಿಯೊಳಗೆ ಪೂರ್ಣಗೊಳಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಿ.ಜಿ.ನಾರಾಯಣ) 26/9
ಉಪ ನಿರ್ದೇಶಕರು ಹಾಗೂ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಗೆ,

1. ಸರ್ಕಾರದ ವಿಶೇಷ ಕಾರ್ಯದರ್ಶಿ, ಕಾನೂನು ಇಲಾಖೆ, ವಿಧಾನ ಸೌಧ, ಬೆಂಗಳೂರು.
2. ಸಲಹೆಗಾರರು, (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

3. ಸರ್ಕಾರದ ಉಪಕಾರ್ಯದರ್ಶಿ, ಸಿ.ಆ.ಸು ಇಲಾಖೆ (ಸೇವಾ ನಿಯಮಗಳು-1) ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಉಪಕಾರ್ಯದರ್ಶಿ, ಸೇವೆಗಳು-1, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಾ ಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು.
8. ನಿರ್ದೇಶಕರು, ಪಂ.ರಾಜ್-1, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. ಇವರ ಆಪ್ತ ಸಹಾಯಕರು.
9. ಸರ್ಕಾರದ ಉಪಕಾರ್ಯದರ್ಶಿ ಆಡಳಿತ-1 ಮತ್ತು ಆಡಳಿತ 2 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
10. ಉಪ ನಿರ್ದೇಶಕರು ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
11. ಸರ್ಕಾರದ ಅಧೀನ ಕಾರ್ಯದರ್ಶಿ, ಸೇವೆಗಳು ಬಿ ಮತ್ತು ಸಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
12. ಸಂಪಾದಕರು, ಕರ್ನಾಟಕ ವಿಕಾಸ / ವೆಬ್‌ಸೈಟ್ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
13. ಕಛೇರಿ ಪ್ರತಿ.

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 693 ಕ್ಕೆ ಅನುಬಂಧ-2



**ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:197:ಗ್ರಪಂಕಾ:2019, ದಿನಾಂಕ: 24.09.2019 ರಲ್ಲಿ ನಿರ್ದೇಶಕರು (ಪಂ.ರಾಜ್-1), ಗ್ರಾಅ ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯು ದಿನಾಂಕ: 13.01.2020 ರಂದು ಅಪರಾಹ್ನ 3.30 ಗಂಟೆಗೆ ನಡೆಸಿದ ಸಭೆಯ ನಡವಳಿ.**

**ಹಾಜರಿದ್ದವರು:**

1. ಶ್ರೀ. ಅಶ್ರಫುಲ್ ಹಸನ್, ನಿರ್ದೇಶಕರು, (ಪಂ.ರಾಜ್-1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಶ್ರೀ. ಎಂ.ಕೆ. ಕೆಂಪೇಗೌಡ, ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ಶ್ರೀ. ಜಿ.ಬಿ. ಹೇಮಣ್ಣ, ಸರ್ಕಾರದ ಉಪಕಾರ್ಯದರ್ಶಿ, ಸೇವೆಗಳು-1, ಆರ್ಥಿಕ ಇಲಾಖೆ.
4. ಶ್ರೀ. ಮಧುಸೂಧನ ಡಿ.ಕೆ. ಸರ್ಕಾರದ ಉಪಕಾರ್ಯದರ್ಶಿ, (ಅಭಿಪ್ರಾಯ-1) ಕಾನೂನು ಇಲಾಖೆ,
5. ಶ್ರೀ. ಎಂ.ಎನ್ ಬಾನೊಳ್ಳಿ, ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು ಇಲಾಖೆ (ಸೇವಾ ನಿಯಮಗಳು-3)
6. ಶ್ರೀ. ರಮೇಶ್. ಡಿ.ಓ, ಉಪನಿರ್ದೇಶಕರು ಹಾಗೂ ಸರ್ಕಾರದ ಅಧೀನ ಕಾರ್ಯದರ್ಶಿ (ಗ್ರಾ.ಪಂ) ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಹಾಗೂ ಸದಸ್ಯ ಕಾರ್ಯದರ್ಶಿ.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿದರು.

ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಮುಂಬಡ್ತಿ ಮತ್ತು ನೇರ ನೇಮಕಾತಿ ಮುಖಾಂತರ ನೇಮಕ ಹೊಂದಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವೃಂದದ ಜಿಲ್ಲಾ ಮಟ್ಟದ ಜೇಷ್ಠತಾ ಪಟ್ಟಿಗಳನ್ನು ಕ್ರೋಢೀಕರಿಸಿ ದಿನಾಂಕ: 21.02.2014 ಮತ್ತು 28.12.2017ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಹೊರಡಿಸಿದ್ದ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಗಳನ್ನು ಅರ್ಜಿ ಸಂಖ್ಯೆ:2259-2261/2014 ಮತ್ತು ಇತರ ಅರ್ಜಿಗಳಲ್ಲಿ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಪ್ರಶ್ನಿಸಿದ್ದು, ಈ ಜೇಷ್ಠತಾ ಪಟ್ಟಿಗಳನ್ನು ಮಾನ್ಯ ಆಡಳಿತ ನ್ಯಾಯ ಮಂಡಳಿಯು ದಿನಾಂಕ: 29.03.2019 ರ ಆದೇಶದಲ್ಲಿ ರದ್ದುಗೊಳಿಸಿದೆ ಮತ್ತು ಸದರಿ ಆದೇಶದಲ್ಲಿ ನೀಡಲಾದ ನಿರ್ದೇಶನಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ಹಂತದಲ್ಲಿ ಒಂದು ಸಮಿತಿಯನ್ನು ರಚಿಸಿ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಕ್ರಮವಹಿಸುವಂತೆ ಸೂಚಿಸಿರುತ್ತದೆ.

ಅದರಂತೆ ದಿನಾಂಕ: 24.09.2019 ರ ಸರ್ಕಾರದ ಆದೇಶದಲ್ಲಿ ರಚಿಸಿರುವ ಸಮಿತಿಯ ಮೊದಲ ಸಭೆಯನ್ನು ದಿನಾಂಕ: 13.01.2020 ರಂದು ನಡೆಸಲಾಯಿತು.

ಸಮಿತಿಯು ಪ್ರಮುಖವಾಗಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ತನ್ನ ಆದೇಶದಲ್ಲಿ ನೀಡಿರುವ ನಿರ್ದೇಶನದಂತೆ ದಿನಾಂಕ: 03.03.2010 ರಂದು ಖಾಲಿ ಇದ್ದ 178 ಪಂಚಾಯಿತಿ ವಿಸ್ತರಣಾಧಿಕಾರಿ ಹುದ್ದೆಗಳಿಗೆ ಆ ಸಂದರ್ಭದಲ್ಲಿ ಚಾಲ್ತಿಯಲ್ಲಿದ್ದ ರಾಜ್ಯ ಮಟ್ಟದ ಗ್ರೇಡ್-1 ಗ್ರಾಮ ಪಂಚಾಯಿತಿ ಕಾರ್ಯದರ್ಶಿ ವೃಂದದ ಜೇಷ್ಠತಾ ಪಟ್ಟಿಯ ಅನುಸಾರ ಅರ್ಹರಿದ್ದ ನೌಕರರಿಗೆ ನೋಷನಲ್ ಬಡ್ತಿ ನೀಡುವ ಸಂಬಂಧ ಚರ್ಚಿಸಿತು.

ಈ ಮಧ್ಯೆ ಮಾನ್ಯ ಕೆ.ಎ.ಟಿಯ ಆದೇಶದ ಅನುಸಾರ 178ಪಂಚಾಯಿತಿ ವಿಸ್ತಾರಣಾಧಿಕಾರಿ ಹುದ್ದೆಗಳಿಗೆ ಕಾಲ್ಪನಿಕವಾಗಿ ಬಡ್ತಿ ನೀಡುವ ಅಂಶಕ್ಕೆ ಸಂಬಂಧಿಸಿದಂತೆ ಬಾಧಿತರಾಗುವ ಕೆಲವು ನೌಕರರು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ಕಲಬುರಗಿ ಪೀಠದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ: 201903-201906/2019 ರಲ್ಲಿ ಮಾನ್ಯ ನ್ಯಾಯಾಲಯವು ನೀಡಿರುವ ಯಥಾಸ್ಥಿತಿ ಕಾಪಾಡುವ ಆದೇಶದ ಮಾಹಿತಿಯನ್ನು ಸಭೆಗೆ ನೀಡಲಾಯಿತು.

ಈ ಸಂಬಂಧ ಆರ್ಥಿಕ ಇಲಾಖೆಯ ಉಪಕಾರ್ಯದರ್ಶಿಯವರು ಮಾತನಾಡಿ ಜೇಷ್ಠತಾ ಪಟ್ಟಿ ಪರಿಷ್ಕರಣೆಗೆ ಸಂಬಂಧಪಟ್ಟಂತೆ ಆರ್ಥಿಕ ಇಲಾಖೆಯವತಿಯಿಂದ ಯಾವುದೇ ಕ್ರಮ ಇರುವುದಿಲ್ಲವಾದ್ದರಿಂದ ಈ ಬಗ್ಗೆ ಸಿ.ಆ.ಸು.(ಸೇನಿ) ಇಲಾಖೆಯೊಡನೆ ಸಮಾಲೋಚಿಸಿ ಕ್ರಮವಹಿಸುವಂತೆ ತಿಳಿಸಿದರು.

ಸಿ.ಆ.ಸು ಇಲಾಖೆಯ ಪ್ರತನಿಧಿಯವರು ಮಾತನಾಡಿ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ನುರಿತ ತಜ್ಞರೊಡನೆ ಸಮಾಲೋಚಿಸಿ ಕ್ರಮವಹಿಸಬೇಕಾಗುತ್ತದೆಂದು ತಿಳಿಸಿದರು.

ಕಾನೂನು ಇಲಾಖೆಯ ಉಪಕಾರ್ಯದರ್ಶಿ (ಅಭಿಪ್ರಾಯ-1) ಇವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಆದೇಶವನ್ನು ವಿವರವಾಗಿ ವಿಶ್ಲೇಷಿಸಿ, ಶ್ರೀ. ಟಿ.ಎಂ. ಶಿವಣ್ಣ ಮತ್ತು ಇತರರು ಮಾನ್ಯ ಕೆ.ಎ.ಟಿ ಯಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ 2879-2901/2009 ರಲ್ಲಿ ಮಾನ್ಯ ಕೆ.ಎ.ಟಿ ಯು ದಿನಾಂಕ: 09.10.2009 ರ ಆದೇಶದಲ್ಲಿ ಸರ್ಕಾರವು ಕಾರ್ಯಕಾರಿ ಆದೇಶದ ಮುಖಾಂತರ 178 ಪಂಚಾಯಿತಿ ವಿಸ್ತರಣಾಧಿಕಾರಿ ಹುದ್ದೆಗಳನ್ನು ರದ್ದು ಪಡಿಸಿರುವ ಆದೇಶವನ್ನು ವಜಾಗೊಳಿಸಿದ ಹಿನ್ನೆಲೆಯಲ್ಲಿ ಹಾಗೂ ಮಾನ್ಯ ಕೆ.ಎ.ಟಿ ಯ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದ ಕಾರಣ ಅದು ಅಂತಿಮಗೊಂಡಿರುವ ಹಿನ್ನೆಲೆಯಲ್ಲಿ ದಿನಾಂಕ: 03.03.2010 ರಂದು 178 ಹುದ್ದೆಗಳು ಖಾಲಿ ಇರುತ್ತವೆಂದೂ, ಆದುದರಿಂದ ಪ್ರಸ್ತುತ ಮಾನ್ಯ ಕೆ.ಎ.ಟಿ ಯು ಪ್ರಸ್ತುತ ನೀಡಿರುವ ಆದೇಶದ ಅನುಸಾರ 178 ಪಂಚಾಯಿತಿ ವಿಸ್ತರಣಾಧಿಕಾರಿ ಹುದ್ದೆಗಳಿಗೆ ಕಾಲ್ಪನಿಕ (Notional) ಬಡ್ತಿ ನೀಡುವ ಅಂಶಕ್ಕೆ ಸಂಬಂಧಿಸಿದಂತೆ ಮಾತ್ರ ಕ್ರಮವಹಿಸಬೇಕಾಗಿದ್ದು ಅದರಂತೆ ಸದರಿ ಹುದ್ದೆಗಳಿಗೆ ದಿನಾಂಕ: 01.01.2010 ರಂದು ಅನ್ವಯಿಸುವಂತೆ ಅಂದು ಚಾಲ್ತಿಯಲ್ಲಿದ್ದ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್-1 ವೃಂದದ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿ ಆಧರಿಸಿ ಅರ್ಹ ನೌಕರರಿಗೆ ಪಂಚಾಯಿತಿ ವಿಸ್ತರಣಾಧಿಕಾರಿ ಹುದ್ದೆಗೆ ಕಾಲ್ಪನಿಕ ಬಡ್ತಿ ನೀಡಬೇಕಾಗುತ್ತದೆ ಎಂದು ತಿಳಿಸಿದರು. ಮುಂದುವರೆದು ಈ ಪ್ರಕ್ರಿಯೆಯಿಂದ ಬಾಧಿತರಾಗಬಹುದಾದದ ನೌಕರರನ್ನು ಕೆ.ಎ.ಟಿ ಯ ಅರ್ಜಿಯಲ್ಲಿ ಪ್ರತಿವಾದಿಗಳನ್ನಾಗಿ \ ಸೇರಿಸದಿರುವ ಹಿನ್ನೆಲೆಯಲ್ಲಿ ಹೊಸದಾಗಿ ತಯಾರಿಸಿರುವ ಪಂಚಾಯಿತಿ ವಿಸ್ತರಣಾಧಿಕಾರಿ ವೃಂದದ ಜೇಷ್ಠತಾ ಪಟ್ಟಿಯಿಂದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವೃಂದದ ಜೇಷ್ಠತೆಯಲ್ಲಿ ಬಾಧಿತರಾಗುವ ನೌಕರರ ಹೆಸರುಗಳನ್ನು ಉಲ್ಲೇಖಿಸಿ ಪ್ರಸ್ತುತ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ಕಲಬುರಗಿ ಪೀಠದಲ್ಲಿ ವಿಚಾರಣೆಯಲ್ಲಿರುವ ರಿಟ್ ಅರ್ಜಿಗೆ ಸಂಬಂಧಿಸಿದಂತೆ ಸರ್ಕಾರಿ ವಕೀಲರ ಮೂಲಕ ಮಾನ್ಯ ನ್ಯಾಯಾಲಯದ ಗಮನಕ್ಕೆ ತಂದು ಆದೇಶ ಕೋರುವಂತೆ ಸಹ ಅವರು ತಿಳಿಸಿದರು.

ಅದರಂತೆ ದಿನಾಂಕ: 01.01.2010 ರಲ್ಲಿರುವಂತೆ ಪಂಚಾಯಿತಿ ವಿಸ್ತರಣಾಧಿಕಾರಿ ವೃಂದದ ಕರಡು ಜೇಷ್ಠತಾ ಪಟ್ಟಿಯನ್ನು ದಿನಾಂಕ: 23.01.2020 ರೊಳಗೆ ಸಿದ್ಧಪಡಿಸಿ ದಿನಾಂಕ: 23.01.2020 ರಂದು ಸಂಜೆ 4 ಗಂಟೆಗೆ ಸಮಿತಿಯ ಸಭೆ ಸೇರಿ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಲು ಸಭೆಯು ನಿರ್ಣಯಿಸಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಅಶ್ರಫುಲ್ ಹಸನ್)
ನಿರ್ದೇಶಕರು, (ಪಂ.ರಾಜ್-1)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ವಿಧಾನ ಸಭೆ ಉತ್ತರಕ್ಕೆ ಸೇರಿಸಿಲ್ಲದ ಪ್ರಶ್ನೆ ಸಂಖ್ಯೆ: 693 ಕ್ಕೆ ಅನುಬಂಧ-3

ಅನುಬಂಧ - 3 47

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:197:ಗ್ರಪಂಕಾ:2019, ದಿನಾಂಕ: 24.09.2019 ರಲ್ಲಿ ನಿರ್ದೇಶಕರು (ಪಂ.ರಾಜ್-1), ಗ್ರಾಅ ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯು ದಿನಾಂಕ: 28.01.2020 ರಂದು ಅಪರಾಹ್ನ 4.00 ಗಂಟೆಗೆ ನಡೆಸಿದ ಸಭೆಯ ನಡವಳಿ.

**ಹಾಜರಿದ್ದವರು:**

1. ಶ್ರೀ. ಅಶ್ರಫುಲ್ ಹಸನ್, ನಿರ್ದೇಶಕರು, (ಪಂ.ರಾಜ್-1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಶ್ರೀ. ಮಧುಸೂಧನ ಡಿ.ಕೆ. ಸರ್ಕಾರದ ಉಪಕಾರ್ಯದರ್ಶಿ, (ಅಭಿಪ್ರಾಯ-1) ಕಾನೂನು ಇಲಾಖೆ,
3. ಶ್ರೀ. ಎಂ.ಕೆ. ಕೆಂಪೇಗೌಡ, ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4. ಶ್ರೀ. ಬಿ. ನವೀನ್‌ಕುಮಾರ್, ಉಪನಿರ್ದೇಶಕರು ಹಾಗೂ ಸರ್ಕಾರದ ಅಧೀನ ಕಾರ್ಯದರ್ಶಿ (ಗ್ರಾ.ಪಂ) ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಹಾಗೂ ಸದಸ್ಯ ಕಾರ್ಯದರ್ಶಿ.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿದರು:

ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಮುಂಬಡ್ತಿ ಮತ್ತು ನೇರ ನೇಮಕಾತಿ ಮುಖಾಂತರ ನೇಮಕ ಹೊಂದಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವೃಂದದ ಜಿಲ್ಲಾ ಮಟ್ಟದ ಜೇಷ್ಠತಾ ಪಟ್ಟಿಗಳನ್ನು ಕ್ರೋಢೀಕರಿಸಿ ದಿನಾಂಕ: 21.02.2014 ಮತ್ತು 28.12.2017ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಹೊರಡಿಸಿದ್ದ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಗಳನ್ನು ಅರ್ಜಿ ಸಂಖ್ಯೆ:2259-2261/2014 ಮತ್ತು ಇತರ ಅರ್ಜಿಗಳಲ್ಲಿ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಪ್ರಶ್ನಿಸಿದ್ದು, ಈ ಜೇಷ್ಠತಾ ಪಟ್ಟಿಗಳನ್ನು ಮಾನ್ಯ ಆಡಳಿತ ನ್ಯಾಯ ಮಂಡಳಿಯು ದಿನಾಂಕ: 29.03.2019 ರ ಆದೇಶದಲ್ಲಿ ರದ್ದುಗೊಳಿಸಿದೆ ಮತ್ತು ಸದರಿ ಆದೇಶದಲ್ಲಿ ನೀಡಲಾದ ನಿರ್ದೇಶನಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ಹಂತದಲ್ಲಿ ಒಂದು ಸಮಿತಿಯನ್ನು ರಚಿಸಿ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಕ್ರಮವಹಿಸುವಂತೆ ಸೂಚಿಸಿರುತ್ತದೆ.

ಅದರಂತೆ ದಿನಾಂಕ: 24.09.2019 ರ ಸರ್ಕಾರದ ಆದೇಶದಲ್ಲಿ ರಚಿಸಿರುವ ಸಮಿತಿಯ ಮೊದಲ ಸಭೆಯನ್ನು ದಿನಾಂಕ: 13.01.2020 ರಂದು ನಡೆಸಲಾಗಿತ್ತು. ಸದರಿ ಸಭೆಯ ನಿರ್ಣಯದಂತೆ ದಿನಾಂಕ: 01.01.2010 ರಂದು ಖಾಲಿ ಇದ್ದ 178 ಪಂಚಾಯಿತಿ ವಿಸ್ತರಣಾಧಿಕಾರಿ ಹುದ್ದೆಗಳಿಗೆ ಗ್ರೇಡ್-1 ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ರಾಜ್ಯಮಟ್ಟದ ಜೇಷ್ಠತಾ ಪಟ್ಟಿ ಆಧರಿಸಿ ಮಾನ್ಯ ಕೆ.ಎ.ಟಿ ಯ ಆದೇಶದಂತೆ ಕಾಲ್ಪನಿಕ ಬಡ್ತಿ ನೀಡಲು ಸಿದ್ಧಪಡಿಸಿದ 178 ನೌಕರರ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಹಿಂದಿನ ಸಂದರ್ಭದಲ್ಲಿ ದಿನಾಂಕ; 31.08.2007 ರಂದು 252 ನೌಕರರಿಗೆ ಬಡ್ತಿ ನೀಡಲಾಗಿದ್ದು ಆ ಸಂದರ್ಭದಲ್ಲಿ ಪರಿಶಿಷ್ಟ ಜಾತಿಗೆ ಸಂಬಂಧಿಸಿದಂತೆ ಒಟ್ಟು 25 ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇರುವುದನ್ನು ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದಂತೆ ಯಾವುದೇ ಬ್ಯಾಕ್‌ಲಾಗ್ ಹುದ್ದೆಗಳು ಇಲ್ಲದಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.

ಪ್ರಸ್ತುತ 178 ಹುದ್ದೆಗಳಿಗೆ ಪರಿಶಿಷ್ಟ ಜಾತಿಗೆ ಸಂಬಂಧಿಸಿದ 27 ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದಂತೆ 5 ಹುದ್ದೆಗಳನ್ನು ಪರಿಗಣಿಸಲಾಗಿದೆ. ಪರಿಶಿಷ್ಟ ಜಾತಿಗೆ ಸಂಬಂದಿಸಿದಂತೆ ಬಾಕಿ ಇರುವ 25 ಬ್ಯಾಕ್‌ಲಾಗ್ ಹುದ್ದೆಗಳನ್ನು ಸೇರಿಸಿ ಒಟ್ಟು 52 ಹುದ್ದೆಗಳಿಗೆ ಬಡ್ತಿ ನೀಡಬೇಕಾಗಿದ್ದು ಅದರಂತೆ ಸಾಮಾನ್ಯ ವರ್ಗಕ್ಕೆ ಸೇರಿದ 121, ಪರಿಶಿಷ್ಟ ಜಾತಿಗೆ ಸೇರಿದ 52 ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ 5 ನೌಕರರಿಗೆ ಜೇಷ್ಠತೆಯನ್ನು ಆಧರಿಸಿ ದಿನಾಂಕ: 01.01.2010 ರಿಂದ ಅನ್ವಯಿಸುವಂತೆ ಕಾಲ್ಪನಿಕ ಬಡ್ತಿ ನೀಡುವ ಸಲುವಾಗಿ ಒಟ್ಟು 178 ನೌಕರರ ಪಟ್ಟಿಯನ್ನು ಸಿದ್ಧಪಡಿಸಿ ಸಮಿತಿಯ ಪರಿಗಣನೆಗೆ ಸಲ್ಲಿಸಲಾಯಿತು.

ಸದರಿ ಪಟ್ಟಿಯನ್ನು ಪರಿಶೀಲಿಸಿದಾಗ 121 ಸಾಮಾನ್ಯ ವರ್ಗದ ನೌಕರರ ನಂತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರನ್ನು ಸೇರಿಸಲಾಗಿದ್ದು ಈ ಪಟ್ಟಿಯನ್ನು ರಾಜ್ಯ ಮಟ್ಟದ ಗ್ರೇಡ್-1 ಕಾರ್ಯದರ್ಶಿಗಳ ಜೇಷ್ಠತ ಪಟ್ಟಿಯಲ್ಲಿನ ಜೇಷ್ಠತೆಯನ್ನು ಆಧರಿಸಿ ಅವರ ಜೇಷ್ಠತೆಗೆ ಅನುಸಾರ ಅವರ ಹೆಸರುಗಳನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ ಎಂದು ಸಭೆಯ ಗಮನಕ್ಕೆ ತರಲಾಯಿತು. ಆದರೆ ಈ ಪಂಗಡಕ್ಕೆ ಸೇರಿದ ನೌಕರರಿಗೆ ರೋಸ್ಟರ್ ಬಿಂದುಗಳ ಅನುಸಾರ ಬಡ್ತಿ ಪಟ್ಟಿಯಲ್ಲಿ ಜೇಷ್ಠತೆ ನೀಡಬೇಕೆ ಅಥವಾ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯಲ್ಲಿನ ಅವರ ಜೇಷ್ಠತೆಗೆ ಅನುಸಾರವಾಗಿ ಜೇಷ್ಠತೆ ನೀಡಬೇಕೆ ಎಂಬ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸಭೆಯಲ್ಲಿ ಸಿ.ಆ.ಸು ಇಲಾಖೆಯ ಸದಸ್ಯರು ಹಾಜರಿಲ್ಲದ ಕಾರಣ ಈ ಸಂಬಂಧ ಸಿ.ಆ.ಸು.(ಸೇವಾ ನಿಯಮ) ಇಲಾಖೆಯ ಅಭಿಪ್ರಾಯ ಪಡೆಯುವುದು ಸೂಕ್ತವೆಂದು ಪರಿಗಣಿಸಿ ಮುಂದಿನ ಸಭೆಯಲ್ಲಿ ಅವರು ಹಾಜರಿರುವಂತೆ ಕೋರಿ ಈ ಬಗ್ಗೆ ಸ್ಪಷ್ಟ ಅಭಿಪ್ರಾಯ ಪಡೆಯುವುದು ಸೂಕ್ತವೆಂದು ಸಭೆಯಲ್ಲಿ ನಿರ್ಣಯಿಸಲಾಯಿತು.

ಅದರಂತೆ ಮುಂದಿನ ಸಭೆಯನ್ನು ದಿನಾಂಕ: 04.02.2020 ರಂದು ಅಪರಾಹ್ನ 4.00 ಗಂಟೆಗೆ ನಡೆಸಲು ನಿರ್ಣಯಿಸಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಅಶ್ರಫುಲ್ ಹಸನ್)
ನಿರ್ದೇಶಕರು, (ಪಂ.ರಾಜ್-1)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 693 ಕ್ಕೆ ಅನುಬಂಧ-4



ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:197:ಗ್ರಾಪಂಕಾ:2019, ದಿನಾಂಕ: 24.09.2019 ರಲ್ಲಿ ನಿರ್ದೇಶಕರು (ಪಂ.ರಾಜ್-1), ಗ್ರಾಅ ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯು ದಿನಾಂಕ: 06.06.2020 ರಂದು ಅಪರಾಹ್ನ 4.00 ಗಂಟೆಗೆ ನಡೆಸಿದ 3ನೇ ಸಭೆಯ ನಡವಳಿ.

**ಹಾಜರಿದ್ದವರು:**

1. ಶ್ರೀ. ಅಶ್ರಫುಲ್ ಹಸನ್, ನಿರ್ದೇಶಕರು, (ಪಂ.ರಾಜ್-1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಶ್ರೀ. ಮಧುಸೂಧನ ಡಿ.ಕೆ. ಸರ್ಕಾರದ ಉಪಕಾರ್ಯದರ್ಶಿ, (ಅಭಿಪ್ರಾಯ-1) ಕಾನೂನು ಇಲಾಖೆ,
3. ಶ್ರೀ. ಚಂದ್ರಶೇಖರ್, ಸರ್ಕಾರದ ಉಪಕಾರ್ಯದರ್ಶಿ, (ಸೇವಾ ನಿಯಮಗಳು-1) ಸಿ.ಆ.ಸು. ಇಲಾಖೆ.
4. ಶ್ರೀ. ಎಂ.ಕೆ. ಕೆಂಪೇಗೌಡ, ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
5. ಶಾಖಾಧಿಕಾರಿ, ಆರ್ಥಿಕ ಇಲಾಖೆ, (ಸೇವೆಗಳು-1) ಆರ್ಥಿಕ ಇಲಾಖೆ.
6. ಶ್ರೀ. ಬಿ. ನವೀನ್‌ಕುಮಾರ್, ಉಪನಿರ್ದೇಶಕರು ಹಾಗೂ ಸರ್ಕಾರದ ಅಧೀನ ಕಾರ್ಯದರ್ಶಿ (ಗ್ರಾಪಂ) ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಹಾಗೂ ಸದಸ್ಯ ಕಾರ್ಯದರ್ಶಿ.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿದರು.

ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಮುಂಬಡ್ತಿ ಮತ್ತು ನೇರ ನೇಮಕಾತಿ ಮುಖಾಂತರ ನೇಮಕ ಹೊಂದಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವೃಂದದ ಜಿಲ್ಲಾ ಮಟ್ಟದ ಜೇಷ್ಠತಾ ಪಟ್ಟಿಗಳನ್ನು ಕ್ರೋಢೀಕರಿಸಿ ದಿನಾಂಕ: 21.02.2014 ಮತ್ತು 28.12.2017ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಹೊರಡಿಸಿದ್ದ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಗಳನ್ನು ಅರ್ಜಿ ಸಂಖ್ಯೆ:2259-2261/2014 ಮತ್ತು ಇತರ ಅರ್ಜಿಗಳಲ್ಲಿ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಪ್ರಶ್ನಿಸಿದ್ದು, ಈ ಜೇಷ್ಠತಾ ಪಟ್ಟಿಗಳನ್ನು ಮಾನ್ಯ ಆಡಳಿತ ನ್ಯಾಯ ಮಂಡಳಿಯು ದಿನಾಂಕ: 29.03.2019 ರ ಆದೇಶದಲ್ಲಿ ರದ್ದುಗೊಳಿಸಿದೆ ಮತ್ತು ಸದರಿ ಆದೇಶದಲ್ಲಿ ನೀಡಲಾದ ನಿರ್ದೇಶನಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ಹಂತದಲ್ಲಿ ಒಂದು ಸಮಿತಿಯನ್ನು ರಚಿಸಿ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಕ್ರಮವಹಿಸುವಂತೆ ಸೂಚಿಸಿರುವ ಬಗ್ಗೆ ಅಧ್ಯಕ್ಷರು ಸಭೆಗೆ ಮತ್ತೊಮ್ಮೆ ವಿವರಿಸಿದರು.

2010ನೇ ಸಾಲಿನಲ್ಲಿ ಒಟ್ಟು 2500 ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ನೇರ ನೇಮಕಾತಿ ಮಾಡಲಾಗಿದೆ. ಈ ಹುದ್ದೆಗಳು ಜಿಲ್ಲಾ ಮಟ್ಟದ ಹುದ್ದೆಗಳಾಗಿದ್ದು ಆಯ್ಕೆ ಪ್ರಾಧಿಕಾರವು ಒಂದೇ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಜಿಲ್ಲಾವಾರು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿತ್ತು. ಈ ಪೈಕಿ 11 ಜಿಲ್ಲೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಗಳಿಗೆ ಸಂಬಂಧಿಸಿದಂತೆ ಕೀ ಉತ್ತರಗಳು ಸರಿ ಇಲ್ಲವೆಂದು, ಹಾಗೂ ಇತರೆ ಕಾರಣಗಳ ಮೇಲೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಬಾದಿತರು ಪ್ರಶ್ನಿಸಿದ್ದು ಈ ಪಟ್ಟಿಗಳಿಗೆ ತಡೆಯಾಜ್ಞೆ ನೀಡಲಾಗಿತ್ತು.

ಈ ಮಧ್ಯೆ ಯಾವುದೇ ತಡೆಯಾಜ್ಞೆ ಇಲ್ಲದ ಉಳಿದ 19 ಜಿಲ್ಲೆಗಳಲ್ಲಿ ದಿನಾಂಕ: 19.03.2010 ರಂದು ನೇಮಕಾತಿ ಆದೇಶ ನೀಡಲಾಗಿದೆ.

ನೇರ ನೇಮಕಾತಿ ಮುಖಾಂತರ 2010 ನೇ ಸಾಲಿನಲ್ಲಿ ಆಯ್ಕೆ ಹೊಂದಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸಂಬಂಧಿಸಿದಂತೆ 19 ಜಿಲ್ಲೆಗಳಲ್ಲಿ ದಿನಾಂಕ: 19.03.2010 ರಂದು ನೇಮಕಾತಿ ಆದೇಶ ನೀಡಲಾಗಿದೆ. ಉಳಿದ ಜಿಲ್ಲೆಗಳಿಗೆ ಸಂಬಂಧಿಸಿದಂತೆ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಮಾನ್ಯ ಕೆ.ಎ.ಟಿ ಯು ತಡೆಯಾಜ್ಞೆ ನೀಡಿದ್ದು,

ತಡೆಯಾಜ್ಞೆಯನ್ನು ತೆರವುಗೊಳಿಸಿ 10 ಜಿಲ್ಲೆ ಗಳಲ್ಲಿ ದಿನಾಂಕ: 12.04.2010 ರಂದು ನೇಮಕಾತಿ ಆದೇಶ ಹೊರಡಿಸಲಾಗಿದೆ. ಕಲಬುರಗಿ ಜಿಲ್ಲೆಯಲ್ಲಿ ದಿನಾಂಕ: 02.08.2010 ರಂದು ನೇಮಕಾತಿ ಆದೇಶ ಹೊರಡಿಸಲಾಗಿದೆ. ಈ ಸಂಬಂಧ 19 ಜಿಲ್ಲಾ ಪಂಚಾಯಿತಿಗಳು ಸಿದ್ಧಪಡಿಸಿರುವ ಜಿಲ್ಲಾ ಹಂತದ ಜೇಷ್ಠತಾ ಪಟ್ಟಿಗಳಲ್ಲಿ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾದ ದಿನಾಂಕ: 05.04.2010 ನ್ನು ನೇಮಕಾತಿ ದಿನಾಂಕವೆಂದು ಪರಿಗಣಿಸಲಾಗಿದೆ.

ಉಳಿದ 10 ಜಿಲ್ಲೆಗಳಿಗೆ ಸಂಬಂಧಿಸಿದಂತೆ ಆಯ್ಕೆ ಪ್ರಾಧಿಕಾರವು ಪ್ರಕಟಿಸಿದ್ದ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಮಾನ್ಯ ಕೆ.ಎ.ಟಿ. ಯು ನೀಡಿದ್ದ ತಡೆಯಾಜ್ಞೆಯನ್ನು ಅಂತಿಮ ನಿರ್ಣಯಕ್ಕೆ ಒಳಪಟ್ಟು ತೆರವುಗೊಳಿಸಿದ ಕಾರಣ ದಿನಾಂಕ 12.04.2010 ರಂದು ನೇಮಕಾತಿ ಆದೇಶ ಹೊರಡಿಸಲಾಗಿದೆ. ಮತ್ತು ಅವರುಗಳನ್ನು ದಿನಾಂಕ 27.04.2010 ರಂದು ತರಬೇತಿಗೆ ಹಾಜರಾಗುವಂತೆ ಸೂಚಿಸಲಾಗಿದೆ. ಈ ಪೈಕಿ ಕೆಲವು ಜಿಲ್ಲೆಗಳ ಜೇಷ್ಠತಾ ಪಟ್ಟಿಗಳಲ್ಲಿ ದಿನಾಂಕ 12.04.2010 ನ್ನು ನೇಮಕಾತಿ ದಿನಾಂಕವೆಂದೂ ಮತ್ತು ಕೆಲವು ಜಿಲ್ಲೆಗಳಲ್ಲಿ ದಿನಾಂಕ 27.04.2010 ನ್ನು(ತರಬೇತಿಗೆ ಹಾಜರಾದ ದಿನಾಂಕ) ನೇಮಕಾತಿ ದಿನಾಂಕವೆಂದು ಪರಿಗಣಿಸಲಾಗಿದೆ.

ಹಾಗೆಯೇ ಕಲಬುರಗಿ ಜಿಲ್ಲೆಗೆ ಸಂಬಂಧಿಸಿದಂತೆ ಮಾನ್ಯ ಕೆ.ಎ.ಟಿ ಯಲ್ಲಿ ತಡೆಯಾಜ್ಞೆ ತೆರವುಗೊಳಿಸುವುದು ವಿಳಂಬವಾದ ಕಾರಣ, ಆ ಜಿಲ್ಲೆಯ ಅಭ್ಯರ್ಥಿಗಳಿಗೆ 02.08.2010 ದಿನಾಂಕದಂದು ನೇಮಕಾತಿ ಆದೇಶ ನೀಡಿ 16.08.2010 ರಂದು ತರಬೇತಿಗೆ ಹಾಜರಾಗಲು ಸೂಚಿಸಲಾಗಿದೆ. ಈ ಜಿಲ್ಲೆಯ ಜೇಷ್ಠತಾ ಪಟ್ಟಿಯಲ್ಲಿ 16.08.2010 ರಂದು ನೇಮಕಾತಿ ದಿನಾಂಕವೆಂದು ಪರಿಗಣಿಸಲಾಗಿದೆ.

ನೇರನೇಮಕಾತಿ ಮೂಲಕ ಜಿಲ್ಲಾವಾರು ನೇಮಕ ಹೊಂದಿದ್ದ ಅಭ್ಯರ್ಥಿಗಳಿಗೆ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯಲ್ಲಿ ಅವರು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಧರಿಸಿ interse ಜೇಷ್ಠತೆ ನಿಗದಿಪಡಿಸಲಾಗಿದೆ. ನ್ಯಾಯಾಲಯವು ತಡೆಯಾಜ್ಞೆ ನೀಡಿದ್ದು ನಂತರ ತೆರವುಗೊಳಿಸಿದ ಹಿನ್ನೆಲೆಯಲ್ಲಿ ಪ್ರಥಮವಾಗಿ 19 ಜಿಲ್ಲೆಗಳಲ್ಲಿ ನೇಮಕ ಹೊಂದಿದ ಅಭ್ಯರ್ಥಿಗಳಿಗೆ ನೀಡಲಾದ ದಿನಾಂಕವನ್ನೇ ಅಂದರೆ ದಿನಾಂಕ 05.04.2010 ನ್ನೇ ಈ ಎಲ್ಲಾ 30 ಜಿಲ್ಲೆಗಳ ಅಭ್ಯರ್ಥಿಗಳಿಗೂ ಜೇಷ್ಠತಾ ದಿನಾಂಕವೆಂದು ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯಲ್ಲಿ ಪರಿಗಣಿಸಲಾಗಿದೆ. ದಿನಾಂಕ: 05.04.2010 ವಾಸ್ತವವಾಗಿ ಹುದ್ದೆಗೆ ಹಾಜರಾತಿ ಸಲ್ಲಿಸಿದ ದಿನಾಂಕವಾಗಿದ್ದು ಆದೇಶ ಹೊರಡಿಸಿದ ದಿನಾಂಕವನ್ನು ಅಂದರೆ ದಿನಾಂಕ: 19.03.2010 ನ್ನು ಅವರ ನೇಮಕಾತಿ ದಿನಾಂಕವೆಂದು ಪರಿಗಣಿಸಬೇಕಾಗುತ್ತದೆಂದು ಮತ್ತು ನ್ಯಾಯಾಲಯದ ತಡೆಯಾಜ್ಞೆಯಿಂದ ಇತರೆ ಜಿಲ್ಲೆಗಳಲ್ಲಿ ವಿಳಂಬವಾಗಿರುವುದಕ್ಕೆ ಅಭ್ಯರ್ಥಿಗಳನ್ನು ಹೊಣೆ ಮಾಡುವುದು ಸೂಕ್ತವಲ್ಲವೆಂದು ತಿಳಿಸಿ ಎಲ್ಲಾ 30 ಜಿಲ್ಲೆಗಳಿಗೂ ದಿನಾಂಕ: 19.03.2010 ನ್ನೇ ನೇಮಕಾತಿ ದಿನಾಂಕವೆಂದು ಪರಿಗಣಿಸಬಹುದೆಂದು ಸಿ.ಆ.ಸು(ಸೇನಿ) ಇಲಾಖೆಯ ಉಪಕಾರ್ಯದರ್ಶಿಯವರು ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರಸ್ತುತ ಬಡ್ತಿ ಕೋಟಾದಡಿ 351 ಪಂಚಾಯಿತಿ ವಿಸ್ತರಣಾಧಿಕಾರಿಗಳನ್ನು ನೇರ ನೇಮಕಾತಿಗಿಂತ ಮುಂಚಿತವಾಗಿ ವಿಲೀನಗೊಳಿಸಿದ್ದು ಅವರುಗಳನ್ನು ಮೊದಲನೇ ಬ್ಲಾಕ್‌ನಲ್ಲಿ ಸೇರಿಸಲಾಗಿದೆ. ಒಟ್ಟು 529 ಪಂಚಾಯಿತಿ ವಿಸ್ತರಣಾಧಿಕಾರಿ ಹುದ್ದೆಗಳಿದ್ದು ಈ ಪೈಕಿ ಉಳಿದ 178 ಹುದ್ದೆಗಳಿಗೆ ನೋಷನಲ್ ಬಡ್ತಿ ನೀಡಲು ಕೆ.ಎ.ಟಿ ಯು ಆದೇಶಿಸಿದೆ. ಇದನ್ನು ಪರಿಗಣಿಸಿದ ನಂತರ ಅವರುಗಳನ್ನು ಮೊದಲನೇ ಬ್ಲಾಕ್‌ನಲ್ಲಿ ಸೇರಿಸಬೇಕಾಗುತ್ತದೆ.

2ನೇ ಬ್ಲಾಕ್‌ನಲ್ಲಿ ದಿನಾಂಕ: 19.03.2010 ಕ್ಕೆ ಮುಂಚಿತವಾಗಿ ಬಡ್ತಿ ಹೊಂದಿದ ನೌಕರರನ್ನು ಸೇರಿಸಬೇಕಾಗುತ್ತದೆ. ಹಾಗೂ ದಿನಾಂಕ: 19.03.2010 ರಿಂದ 05.04.2010 ರ ನಡುವೆ ಬಡ್ತಿ ಹೊಂದಿರುವ ನೌಕರರ ಜೇಷ್ಠತೆಯನ್ನು ನೇರ ನೇಮಕಾತಿ ಮುಖಾಂತರ ಮೊದಲನೇ ಪಟ್ಟಿಯಲ್ಲಿ ನೇಮಕ ಹೊಂದಿದ ನೌಕರರ ನಂತರ ಸೇರಿಸಬೇಕಾಗುತ್ತದೆ ಎಂದು ಚರ್ಚಿಸಿ ನಿರ್ಣಯಿಸಲಾಯಿತು.

67



ಮುಂದುವರೆದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನೌಕರರಿಗೆ ಬಡ್ತಿ ನೀಡುವ ಸಂಬಂಧ ರೋಸ್ಟರ್ ಬಿಂದುಗಳ ಅನುಸಾರ ಬಡ್ತಿ ಪಟ್ಟಿಯಲ್ಲಿ ಜೇಷ್ಠತೆ ನೀಡಬೇಕೆ ಅಥವಾ ಅವರ ಜೇಷ್ಠತೆಯ ಅನುಸಾರ ಜೇಷ್ಠತೆ ನೀಡಬೇಕೆ ಎಂಬ ಅಂಶಕ್ಕೆ ಸಂಬಂಧಪಟ್ಟಂತೆ ರೋಸ್ಟರ್ ಬಿಂದುಗಳು ಆ ವರ್ಗದ ನೌಕರರಿಗೆ ಮೀಸಲಾತಿಗಾಗಿ ಮಾತ್ರ ಅನ್ವಯವಾಗಲಿದ್ದು ಜೇಷ್ಠತಾ ಪಟ್ಟಿಯಲ್ಲಿ ಅವರ ಜೇಷ್ಠತೆ ಬದಲಾಗುವುದಿಲ್ಲವೆಂದು ಸಿ.ಆ.ಸು ಇಲಾಖೆಯ (ಸೇನಿ) ಉಪಕಾರ್ಯದರ್ಶಿಯವರು ಸ್ಪಷ್ಟಪಡಿಸಿದರು.

ಈ ಮಧ್ಯೆ ಶ್ರೀ. ಸಂಜೀವಪ್ಪ ಕೆ.ಪಿ ಮತ್ತು ಇತರರು ಮಾನ್ಯ ಉಚ್ಚನ್ಯಾಯಾಲಯದ ಮುಖ್ಯ ಪೀಠದಲ್ಲಿ ಸಲ್ಲಿಸಿರುವ ಮೇಲ್ಮನವಿ ಅರ್ಜಿ ಸಂಖ್ಯೆ 26196/2019 ರಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ: 29.11.2019 ರಂದು ಈ ಕೆಳಕಂಡಂತೆ ಆದೇಶಿಸಿದ್ದು ಅದನ್ನು ಸಭೆಯ ಗಮನಕ್ಕೆ ತರಲಾಯಿತು.

> Parties are directed to maintain status quo with reference to seniority list until these writ petitions and other writ petition filed by the State are decided on merits.

ಅದರಂತೆ ಮಾನ್ಯ ಉಚ್ಚನ್ಯಾಯಾಲದ ಆದೇಶದ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್-1 ವೃಂದದಿಂದ ಪಂಚಾಯಿತಿ ವಿಸ್ತರಣಾಧಿಕಾರಿ ವೃಂದಕ್ಕೆ 178 ನೌಕರರಿಗೆ ಪೂರ್ವಾನ್ವಯ ಬಡ್ತಿ ನೀಡುವ ಸಂಬಂಧ ಸಿದ್ದಪಡಿಸಿರುವ ಪಟ್ಟಿ ಹಾಗೂ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸುವ ಸಂಬಂಧ ಪಟ್ಟಿಯನ್ನು ಸಿದ್ಧಪಡಿಸಿ ಇಟ್ಟುಕೊಳ್ಳತಕ್ಕದೆಂದು ಮತ್ತು ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ಆದೇಶದ ನಂತರ ನ್ಯಾಯಾಲಯವು ನೀಡಬಹುದಾದದ ಆದೇಶವನ್ನು ಅನುಸರಿಸಿ ಇವುಗಳನ್ನು ಪ್ರಕಟಿಸುವ ಬಗ್ಗೆ ನಂತರ ನಿರ್ಣಯ ತೆಗೆದುಕೊಳ್ಳಬಹುದೆಂದು ಸಭೆಯು ತೀರ್ಮಾನಿಸಿತು.

ಮುಂದಿನ ಸಭೆಯನ್ನು 2 ವಾರಗಳ ನಂತರ ನಡೆಸಬಹುದೆಂದು ನಿರ್ಣಯಿಸಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಅಶ್ರಫುಲ್ ಹಸನ್) 6/6

ನಿರ್ದೇಶಕರು, (ಪಂ.ರಾಜ್-1)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಮತ್ತು ಅಧ್ಯಕ್ಷರು.